ತೋಟಗಾರಿಕೆ ಇಲಾಖೆಯ ಸಂಸ್ಕರಣ ಘಟಕಗಳು.

4170(4528) ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ (ಧಾರವಾಡ) :— ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತೋಟಗಾರಿಕೆ ಇಲಾಖೆಯ ಸಂಸ್ಕರಣಾ ಘಟಕ ಹಾಗೂ ಶೈತ್ಯಾಗಾರ ಘಟಕಗಳು ರಾಜ್ಯದ ಯಾವ ಯಾವ ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪಿಸಲಾಗಿದೆ?

ಆ) ಸಂಸ್ಕರಣಾ ಘಟಕ ಸ್ಥಾಪಿಸಲು ಹೊಸ ಸ್ಥಳಗಳನ್ನು ಗುರುತಿಸಲಾಗಿದೆಯೇ ಈ ಇಲಾಖೆಯ ರಫ್ತು ಮತ್ತು ಮಾರಾಟ ಮಾಡುವ ಸಲುವಾಗಿ ಪಡೆಯುವ ತೋಟಗಾರಿಕಾ ಬೆಳೆಗಳಿಗೆ ನಿಗಧಿತ ಬೆಂಬಲ ಬೆಲೆಯನ್ನು ನಿರ್ಧರಿಸಿದೆಯೇ?

ಇ) ಸಂಸ್ಕರಣಾ ಘಟಕಗಳಲ್ಲಿ ಕಾರ್ಯ ನಿರ್ವಹಿಸಲು ಉನ್ನತಮಟ್ಟದ ತಂತ್ರಜ್ಞಾನ ನಡೆದಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಯಾವ ಯಾವ ಜಿಲ್ಲಾ ಸ್ಥಳಗಳಲ್ಲಿ ಸದರಿ ಸಿಬ್ಬಂದಿಗಳಿದ್ದಾರೆ (ಕಳೆದ 3 ವರ್ಷಗಳ ಸಂಪೂರ್ಣ ವಿವರ ನೀಡುವುದು)

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :—

ಅ) ಬೆಂಗಳೂರಿನ ಲಾಲ್‌ಬಾಗ್, ಕೋಲಾರ, ಚಿಕ್ಕಬಳ್ಳಾಪುರ ಮತ್ತು ಹಾಸನದಲ್ಲಿ ತಲಾ ಒಂದರಂತೆ ಒಟ್ಟು ನಾಲ್ಕು ಶೈತ್ಯಾಗಾರಗಳನ್ನು ತೋಟಗಾರಿಕೆ ಇಲಾಖೆಯಿಂದ ಸ್ಥಾಪಿಸಲಾಗಿದೆ. ಇಲಾಖೆಯಿಂದ ಯಾವುದೇ ಸಂಸ್ಕರಣಾ ಘಟಕ ಸ್ಥಾಪಿಸಿರುವುದಿಲ್ಲ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕು ಕೇಂದ್ರದಲ್ಲಿ ತೋಟಗಾರಿಕಾ ಸಸಿಗಳು.

4173(4576) ಶ್ರೀ ಬಸವಂತರೆಡ್ಡಿ ಮೊದಕಪಲ್ಲಿ (ಸೇಡಂ) :— ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1 ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕು ಕೇಂದ್ರದಲ್ಲಿ ತೋಟಗಾರಿಕೆ ಸಹಾಯಕ ನಿರ್ದೇಶಕರ ಕಾರ್ಯಾಲಯದಲ್ಲಿ 1997-98ರಿಂದ 1999-2000 ರವರೆಗೆ ತೋಟಗಾರಿಕೆ ಸಸಿಗಳು ಕಳುಹಿಸಿರುವುದು ಎಷ್ಟು? ಯಾವ ಯಾವ ಸಸಿಗಳು ವಿವರ

2 ಈ ಕಾರ್ಯಾಲಯದಿಂದ ಈ ಸಸಿಗಳು ಯಾವ ಯಾವ ಗ್ರಾಮದ ಫಲಾನುಭವಿಗಳಿಗೆ ಯಾವ ಯಾವ ಸರ್ವೆ ನಂಬರ್‌ಗಳಲ್ಲಿ ವಿತರಿಸಲಾಗಿದೆ.

3. ಈ ವಿತರಣೆ ಮಾಡಿರುವ ಸಸಿಗಳು ಬೆಳೆದು ಫಲಕಾರಿಯಾಗಿರುವುದು ಯಾವ ಯಾವ ಗ್ರಾಮಗಳಲ್ಲಿ ಯಾವ ಯಾವ ಫಲಾನುಭವಿಗಳಲ್ಲಿ ಸರ್ವೆ ನಂಬರುವಾರು ವಿವರ ಒದಗಿಸುವುದು.